		Asst. Artisan	51	5	–	6
		Electrician	7	–	–	3
		Welder	2	2	–	–
6	Bijapur	Driver	218	12	–	50
		Conductor	100	40	2	17
		Security Guard	18	4	–	3
7	Bellary	Driver	197	29	4	38
		Conudctor	266	58	8	48
8	Raichur	Driver	332	21	2	78
		Conductor	362	62	4	64
		Artisan	6	1	–	3
		Asst. Artisan	12	4	–	4
9	Gulbarga	Driver	579	55	2	131
		Conductor	738	96	9	156
		Helper 'B'	123	24	6	22
10	Hubli	Drive	340	8	–	82
		Conductor	550	64	5	113
		Security Guard	33	9	–	3
		Helper 'B'	190	38	1	36
11	Belgaum	Driver	145	12	–	31
		Conductor	192	49	3	28
		Security Guard	6	2	–	1
		Sty. Havildar	3	2	–	–
12	Hassan	Driver	22	3	1	–
		Conductor	57	3	2	1
13	N K	Driver	120	8	1	31
		Conductor	186	41	4	32
		Sty. Guard	6	1	–	1
14	R. W. B.	Helper 'B'	315	45	11	54
		Sty. Guard	48	7	2	8
15	R.W.H.	Helper 'B'	179	36	2	32
		Sty. Guard	40	10	–	7

ಜಗಳೂರಂ ತಾಲ್ಲೂಕಿನಿಂದ ಇತರೆ ಸ್ಥಳಗಳಿಗೆ ವಾಹನ ಸೌಲಭ್ಯ

೧೧ಳಳಿ, ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ. (ಜಗಳೂರು) ಮಾನ್ಯ ಸಣ್ಣ ಉಳಿತಾಯ, ಬಂದೀಖಾನೆ, ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಗಳೂರು, ರಂಗಾಪುರ, ತಮ್ಮಡಿಹಳ್ಳಿ, ಗೌಡಗಾನಹಳ್ಳಿ, ಗೌರಿಪುರ, ಕಟ್ಟಸೇನಹಳ್ಳಿ, ಚಿಕ್ಕ ಉಜನಿ ಮೂಲಕ ಕೊಟ್ಟೂರು ಕೂಡ್ಲಿಗಿ ಮತ್ತು ಹೊಸಪೇಟೆಗೆ ಈಗ ಯಾವ ವಾಹನ ಸೌಕರ್ಯವೂ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅ) ಚಿತ್ರದುರ್ಗದಿಂದ ತುರುವನೂರು, ದೊಡ್ಡಗಟ್ಟ, ಉಪಾರಟ್ಟಿ, ಕಡಬಕಟ್ಟಿ, ವಂಸ್ತ್ರರು, ದೊಣ್ಣೇಹಳ್ಳಿ, ಜಗಳೂರು, ಚಿಕ್ಕಮ್ಮನಹಟ್ಟಿ, ಚಿಕ್ಕಬನ್ನಿಹಟ್ಟಿ, ಹಿರೇಬನ್ನಿಹಟ್ಟಿ, ಸೊಕ್ಕೆ ಮತ್ತು ಬಿಳಿಜೋಡು ಮೂಲಕ ದಾವಣಗೆರೆಗೆ ಯಾವ ವಾಹನ ಸೌಕರ್ಯವು ಇಲ್ಲದಿರುವುದು ಸಹಾ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇದರಿಂದ ಜನರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸದರೀ ಮಾರ್ಗಗಳಲ್ಲಿ ಸರ್ಕಾರದವರು ಬಸ್ಸುಗಳನ್ನು ಓಡಿಸಲು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಸಾರಿಗೆ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ

ಇ) ಬಹುತೇಕ ಗ್ರಾಮಗಳು ಪ್ರಸ್ತುತ ಬಸ್‌ಮಾರ್ಗಕ್ಕೆ ಹತ್ತಿರವಾಗಿರುವುದರಿಂದ ಗಮನಾರ್ಹ ಆನಾನುಕೂಲ ಉಂಟಾಗಿಲ್ಲ.

ಈ) ವಾಹನ ಯೋಗ್ಯ ರಸ್ತೆಗಳ ಅಭಾವದ ಕಾರಣಗಳಿಂದಾಗಿ ಸೂಚಿತ ಮಾರ್ಗಗಳಲ್ಲಿ ಪ್ರಯಾಣಿಕರ ರಸ್ತೆ ಸಾರಿಗೆಯನ್ನು ಪ್ರಾರಂಭಿಸಲು ಸಾಧ್ಯವಾಗದು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಮಂಡಿಸಲಾಯಿತು.

ತುಮಕೂರು ತಾಲ್ಲೂಕಿಂ ಹಿರೇಗುಂಡಗಲ್ಲು ಗ್ರಾಮಕ್ಕೆ ಬಸ್ಸಿನ ಸೌಕರ್ಯ

೧೧೪೭, ಶ್ರೀ ಜಿ. ಎಸ್. ಶಿವನಂಜಪ್ಪನವರು (ಗುಬ್ಬಿ) ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ತಾಲ್ಲೂಕು ಹಿರೇಗುಂಡಕಲ್ಲು ಗ್ರಾಮಸ್ಥರು ತಮ್ಮ ಊರಿಗೆ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಸ್ಸಿನ ಸೌಕರ್ಯವನ್ನು ಒದಗಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತುಮಕೂರಿನಿಂದ ಹಿರೇಗುಂಡಕಲ್ಲಿಗೆ ಈ ಕೆಳಕಾಣಿಸಿದ ವೇಳೆಯಲ್ಲಿ ೪ ಟ್ರಿಪ್ಪುಗಳ ಸಾರಿಗೆ ಸೌಕರ್ಯವನ್ನು ಒದಗಿಸಿವೆ,

೧೭೦೦	೧೧೧೫	ತುಮಕೂರು	೦.೦	೧೦೧೦	೧೬೦೦
೧೬೩೫	೧೦೪೦	ಹಿರೇಗುಂಡಕಲ್	೧೩.೦ ಕಿ.ಮಿ.	೧೦೩೫	೧೬೨೫